ಮೂಲಕ ಕರ್ರ್ಯಾಕ ಹೋದ್ರು. ಹಿಂದಿಂದ ರಶೀದಸಾಬುನ ಭಕ್ತರು ತುಂಬಿತುಳುಕಿ ಇನ್ಮುಂದ ರಶೀದಸಾಬುಂದೇ ನಡಿಯೋದಂತ ಭಾರಿ ಉಮೇದಿಯಲ್ಲಿದ್ರು. ಮೇಲು ಮಾಳಿಗಿಮ್ಯಾಲ ಅಂಜು ಇದನ್ನೆಲ್ಲಾ ನೋಡುತ್ತ ಬೆಳದಿಂಗಳಿಗೆ ಹಾಲುಕ್ಕಿದಂಗ ಕಾಣುವ ಹೊಳಿದಿಕ್ಕಿಗೆ ಮುಖಮಾಡಿ 'ಲೋ.. ಬರ್ರ್ಯಾ..ಇಲ್ಲಿ ನೋಡಿದ್ರ ನಿಮ್ಮಪ್ಪನ ದೇವ್ರಿಗೆ ಜಾಕೀರನ ನೇಮಿಸಿ ನಿಮ್ಮಪ್ಪನ ಹೆಸ್ರು, ನಿನ್ ಹೆಸ್ರು ಅಳಿಸಿ ಹಾಕಾಕ ಮುಂದಾಗ್ಯಾರ... ಒಂದಿಷ್ಟಾದ್ರ ನಿನ್ ಮೈಯ್ಯಾಗ ಕಿಚ್ಚು, ಶೌರ್ಯ ಇಲ್ಲೇನು... ವರ್ಸಗಟ್ಲೆ ಪ್ರಾಣಕ್ಕಿಂತ ಹೆಚ್ಚಾಗಿ ಪ್ರೀತಿಸ್ತಿನಿ, ಮದ್ವಿಯಾಗ್ತಿನಿ, ಕೊನಿತನಕ ಛಲೋ ನೋಡಿಕೊಳ್ತಿನೆಂತ ಏನೆನೋ ಗೋಪುರ ಕಟ್ಟಿ ಈಗ ನೋಡಿದ್ರ ಅನಾಥಿ ಮಾಡಿ ಊರುಬಿಟ್ಟು ಕೂತಿದ್ದಿ.. ಹಿಂಗಮಾಡಿದ್ರ ಮನಸಾಕ್ಷಿಯಾದ್ರು ಹೆಂಗ ಒಪ್ಪುತ್ತ' ಅಂತ ಅಂಜು ಸಿಟ್ಟಲೆ ಅಳುತ್ತಲೆ ಮೆಸೇಜು ಕುಟ್ಟಿದ್ಲು. ಆದ್ರ ಬೀರ ಮೆಸೇಜು ನೋಡಿರಲಿಲ್ಲ. ಮೆಸೇಜುನೋಡಿ ರಿಪ್ಲೆ ಮಾಡವರೆಗೆ ನಿದ್ದಿಮಾಡದೆ ಮೇಲು ಮಾಳಿಗಿಮ್ಯಾಲ ಕಣ್ಣೀರು ಹಾಕುತ್ತಲೇ ಕೂತಿದ್ಲು.

ಥಂಡಿ ನೋಡಿದ್ರ ತಣ್ಣಗ ಊತಿತ್ತು. ಇಂಥ ಥಂಡ್ಯಾಗ ಭರ್ತಿ ಅಲೈಕಾವು ಏರಿತ್ತು. ಮಂದಿ ವರ್ಸದಂಗ ಬೆಂಕಿ ಕುಣಿಸುತ್ತ ತುಂಬಿತ್ತು. ಹರೇದ ಹುಡುಗ್ರು ಅಲೈ ಕುಣಿಯಲು ಜೋಡುಜೋಡು ಹಲಿಗಿ ತಂದು ಕುಣಿಯತೊಡಗಿದ್ರು. ಹರಿಕಿಮಂದಿ ಮಸೂತಿ ಎದಿರಿಗೆ ಕೊಬ್ರಿ, ಪಂಜು, ಉಕ್ಕಿನಬಾಣ ಸುಡೋದು, ಓದಿಕಿ ಓದಿಸೋದು ನಡಿದೇ ಇತ್ತು. ಜಾಕೀರ ಹುಸೇನನ ಮೆರವಣಿಗೆ ಛತ್ರಿ, ಚಾಮರದೊಂದಿಗೆ ದೇವ್ರುಗುಡಿ ಸಮೀಪ ಬರಲು ಮುಂದಾಗಿತ್ತು.

ಹೊಳಿದಂಡಿಮ್ಯಾಲ ಸುಮಾರುಹೊತ್ತು ಬೀರ ಕೂತಿದ್ದ. ಒಮ್ಮೆಲೆ ಡಮ್‌ಡುಮಾಲ್‌ಂತ ಊರಾಗ ಉಕ್ಕಿನಬಾಣ ಸಿಡಿಸಿದಾಗ ಎದಿಗೆ ಗುಂಡಿಟ್ಟು



ಹೊಡದಂಗಾತು. ಮೊದಲ ಉಕ್ಕಿನಬಾಣ ಸವಾರಿಗೆ ಮಂದಿಸೇರಲು ಗುರುತಿನ ಬಾಣವಾಗಿತ್ತು, ಎರಡನೇದು ನಮಗ್ಯಾಕಂತ ತಣ್ಣಗೆ ಮಲಿಗಿದ ಗೌಡ್ರು, ಐನೇರು ಮಂದಿನ ಎಬ್ಬಿಸುವ ಗುರುತಾಗಿತ್ತು. ಮೂರನೇದು ಸವಾರಿ ಎಬ್ಬಿಸುವ ಗುರುತಾಗಿತ್ತು. ಎರಡನೇದು ಸಿಡಿಸಿದ ಬಾಣ ಆಕಾಶದ ಎತ್ತರಕ್ಕೆ ಸಿಡಿಲಿನಂಗ ಸಿಡಿದು ಹೊಳಿತುಂಬ ಬೆಂಕಿಮಳೆ ಸುರಿಸಿದಂಗಾತು. ಈ ಬೆಂಕಿ ಮಳಿಯಂತ ಬೆಳಕಿನ್ಯಾಗ ದಾನಪ್ಪ ಬೆಳ್ಳಗೆ ಕಣ್ತುಂಬಾಗಿ ಹೊಳಿಮ್ಯಾಲ ನಡಿಯುತ್ತ ಪ್ರತ್ಯಕ್ಷ ಆದಂಗಾತು. ಒಮ್ಮಿಗೆ ಬೀರನ ಬದಿಗೆ ಕೂತವನೇ 'ದೇವ್ರ ಹೆಸರಿಮ್ಯಾಲ ನಾವ್ಯಾರಿಗೂ ಮೋಸಮಾಡಿಲ್ಲ.. ಅನ್ಯಾಯ ಮಾಡಿಲ್ಲ.. ಬಡಬಗ್ರನ ಸುಲಿದು ಸುಲಿಗಿಮಾಡಿಲ್ಲ.. ಆ ಧರ್ಮ ಈ ಧರ್ಮಂತ ಭೇದಮಾಡಿಲ್ಲ.. ಸತ್ಯುಳ್ಳ ದೇವ್ರು ಹಿಡಿದಾಗಿಂದ ಎಲ್ರೂಕೂಡಿ ಹಬ್ಬ ಮಾಡಿದಂಗ ಒಂದೇ ಅಂತ ತಿಳ್ಕೊಂಡಿದ್ದೆ. ಆತನ ಶಕ್ತಿ ಮುಂದ ನಾವೆಲ್ಲ ಸಣ್ಣವರು. ಆತ ನುಡಿಸಿದಂಗ, ನಡಿಸಿದಂಗ ನುಡಿದಿನಿ. ಆಘಾತಕ್ಕ ತಾಯ್ತುಮಂತ್ರ, ನಿಂಬೆಣ್ಣು ಕಟ್ಟಿ ಭಕ್ತರ ನಂಬಿಕಿ ಉಳಿಸಿ ಗಳಿಸಿನಿ. ಇನ್ನಾದ್ರು ಮಂದಿಗೆ ನಮ್ಯಾಲ ನಂಬಿಕೆ ಹೋಗಿಲ್ಲ. ಸಂನ್ಯಾಸಿಯಂಗ ಒಬ್ನೆ ಹೊಳಿದಂಡಿಗೆ ಕೂಡಬ್ಯಾಡ.. ನಿಂದು ನೀ ಪಡಕ ಹೋಗು.. ನಿನ್ನಿಂದ ಸಾಕಷ್ಟು ಜಾತ್ರಿನಾ ಐತಿ.. ಹೋಗಿ ಯಾರನೂ ಅಂಗಲಾಚಿ ಬೇಡಬ್ಯಾಡ.. ಆತನಮುಂದ ಕುದ್ರಿಯಾಗಿ ನಿಲ್ಲು.. ಆಮ್ಯಾಲಬಂದು ಮಾತಾಡು..' ಅಂತ ದಾನಪ್ಪ ಮಗನಮುಂದ ಕೂತು ಬೆನ್ನು ಚಪ್ಪರಿಸಿ ಹೇಳಿ ಕಳಿಸಿದಂಗಾತು.

ಬೀರ ದೇವ್ರುಗುಡಿಗೆ ಬಂದುಕೂತ. ಮೂರನೇ ಬಾಣ ಡುಡುಮ್‌ಂತ ಸಿಡಿತು. ಇನ್ನೇನು ಜಾಕೀರ್‌ಹುಸೇನ್ ಮೈತುಂಬ ಬೆಳ್ಳಗಾಗಿ ದೇವ್ರು ಹಿಡಿಯಲು ಮುಂದಾಗಿದ್ದ. ಬೀರ ಕುಣಿದಂಡಿಮ್ಯಾಲಿದ್ದು ಕೆಂಡ ನೋಡಿದ. ತಣ್ಣಗ ನಿಗಿನಿಗಿ ಉರಿತಿತ್ತು. ಆಮ್ಯಾಲ